ಇ) ಉಪ ಪ್ರಶ್ನೆ (ಅ) ಮುಂದೆ ವಿವರಿಸಿರುವ ಕಾರ್ಯಕ್ರಮಗಳಿಗಾಗಿ ರೂ.20,000–00 ಮೊತ್ತ ಬಿಡುಗಡೆ ಮಾಡಲಾಗಿದೆ. ಅದರಲ್ಲಿ 3 ಹೋಬಳಿಗಳ ಕಾರ್ಯಕ್ರಮಗಳಿಗೆ 15,000–00 ವೆಚ್ಚವಾಗಿದ್ದು, ಉಳಿದ ಒಂದು ಹೋಬಳಿಯಲ್ಲಿ ಏಪ್ರಿಲ್ ಮಾಹೆಯಲ್ಲಿ ಈ ಕಾರ್ಯಕ್ರಮಗಳನ್ನು ನಡೆಸಲು ಹಮ್ಮಿಕೊಳ್ಳಲಾಗಿದೆ.

1928(1865) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ (ಬ್ರಹ್ಮಾವರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೆ.ಎನ್.ಯು.ಆರ್.ಎಂ. ಯೋಜನೆಯ ರೂಪುರೇಷೆಗಳು;

ಆ) ಈ ಯೋಜನೆಯಡಿ ಯಾವ ಕಾರ್ಯಕ್ರಮ ಕೈಗೊಳ್ಳಲಾಗಿದೆ (ವಿವರ ಒದಗಿಸುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿ) :

ಅ) ವಿವರಗಳನ್ನು ಅನುಬಂಧ – 1 ರಲ್ಲಿ ಒದಗಿಸಲಾಗಿದೆ.

ಆ) ವಿವರಗಳನ್ನು ಅನುಬಂಧ – 2 ರಲ್ಲಿ ಒದಗಿಸಲಾಗಿದೆ.

ಅನುಬಂಧ – 1

ಜವಾಹರ್ ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಧ್ಯೇಯ (ಜೆ.ಎನ್.ಎನ್.ಯು. ಆರ್.ಎಂ) ಯ ರೂಪುರೇಷೆಗಳು

ಭಾರತ ಸರ್ಕಾರವು ಪ್ರಸ್ತುತ ಆರ್ಥಿಕ ವರ್ಷದಲ್ಲಿ 'ಜವಾಹರ್ ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಧ್ಯೇಯ (ಜೆ.ಎನ್.ಎನ್.ಯು.ಆರ್. ಎಂ) ಎನ್ನುವ ಕಾರ್ಯಕ್ರಮದಡಿಯಲ್ಲಿ ನಗರಗಳ ಸಮಗ್ರ ಅಭಿವೃದ್ಧಿಯ ಯೋಜನೆಯನ್ನು ಡಿಸೆಂಬರ್ 3 ನೇ 2005 ರಂದು ಪ್ರಾರಂಭಿಸಿದೆ. ಜೆ.ಎನ್.ಎನ್.ಯು.ಆರ್. ಎಂ ಆರ್ಥಿಕ ಸ್ವಾವಲಂಬನೆ ಸಾಧಿಸಲು, ನಗರಗಳ ಪ್ರಸ್ತುತ ಸೇವಾ ಮಟ್ಟಗಳನ್ನು ವೃದ್ಧಿಗೊಳಿಸಲು ಬೇಕಾದ ಪ್ರೋತ್ಸಾಹವನ್ನು ಕಲ್ಪಿಸುವ ಗುರಿ ಹೊಂದಿರುತ್ತದೆ. ಜೆ.ಎನ್.ಎನ್.ಯು.ಆರ್. ಎಂ ಎರಡು ಉಪ ಧ್ಯೇಯಗಳನ್ನು ಒಳಗೊಂಡಿದೆ.

1) ನಗರ ಮೂಲಸೌಕರ್ಯ ಮತ್ತು ಆಡಳಿತ

2) ನಗರದ ಬಡವರಿಗೆ ಮೂಲಭೂತ ಸೌಕರ್ಯ ಸೇವೆಗಳು

ಜೆ.ಎನ್.ಎನ್.ಯು.ಆರ್. ಎಂ ನ ಪ್ರಾಥಮಿಕ ಉದ್ದೇಶವು ಆರ್ಥಿಕವಾಗಿ ಫಲದಾಯಕ, ಸಮರ್ಥ, ಸಮಾನತೆ ಮತ್ತು ಪ್ರತಿಕ್ರಿಯಿಸುವ ನಗರಗಳನ್ನು ನಿರ್ಮಿಸುವುದರಲ್ಲಿ ಈ ಕೆಳಕಂಡವುಗಳನ್ನು ಕೇಂದ್ರೀಕರಿಸಿದೆ.

ಮೂಲಭೂತ ಸೇವೆಗಳ ಸಮಗ್ರ ಅಭಿವೃದ್ಧಿ

1) ಯೋಜನೆಗಳ ದೀರ್ಘಾವಧಿ ಸಂರಕ್ಷಣೆಗೆ ಆಸ್ತಿ ನಿರ್ಮಾಣ ಹಾಗೂ ಅವುಗಳ ನಿರ್ವಹಣೆ ನಡುವೆ ಸಂಬಂಧ ಕಲ್ಪಿಸುವುದು.

2) ನಗರ ಮೂಲ ಸೌಕರ್ಯ ಸೇವೆಗಳಲ್ಲಿ ಹೂಡಿಕೆಯನ್ನು ತ್ವರಿತಗೊಳಿಸುವುದು.

3) ನಗರ ಪ್ರದೇಶಗಳು, ನಗರದ ಸುತ್ತಮುತ್ತಲಿನ ಪ್ರದೇಶಗಳು, ಪ್ರವೇಶ ಭಾಗಗಳ ಅಭಿವೃದ್ಧಿ.

4) ನಗರದ ಒಳಪ್ರದೇಶಗಳ ನವೀಕರಣ ಹಾಗೂ ಪುನರ್ ಅಭಿವೃದ್ಧಿ

5) ನಗರದ ಬಡಜನರಿಗೆ ನಗರ ಸೇವೆಗಳನ್ನು ಕಲ್ಪಿಸಲು, ಅವುಗಳ ಸಾರ್ವತ್ರೀಕರಣ.

ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರವು 63 ನಗರಗಳನ್ನು ಗುರುತಿಸಿದೆ. ಅದರಲ್ಲಿ ಕರ್ನಾಟಕ ರಾಜ್ಯದಿಂದ ಬೆಂಗಳೂರು ಮತ್ತು ಮೈಸೂರು ನಗರಗಳು ಒಳಗೊಂಡಿರುತ್ತದೆ.

ಈ ಯೋಜನೆಯಡಿಯಲ್ಲಿ ಸಹಾಯ ಪಡೆಯಲು ಪೂರ್ವಾಪೇಕ್ಷಿತವಾಗಿ, ಸಮಗ್ರ ನಗರ ಅಭಿವೃದ್ಧಿ ರೂಪುರೇಖೆಗಳ ವರದಿ, ವಿವರವಾದ ಯೋಜನಾ ವರದಿ ಮತ್ತು ನಗರ ವಲಯ ಸುಧಾರಣೆಗಳ ಅನುಷ್ಠಾನಕ್ಕೆ ಕಾಲಾವಧಿಯನ್ನು ನಿರ್ಧರಿಸುವ ವರದಿಯನ್ನು ಸಿದ್ಧಪಡಿಸಬೇಕಾಗಿದೆ.

ಜೆ.ಎನ್.ಎನ್.ಯು.ಆರ್.ಎಂ ನ ಮಾರ್ಗಸೂಚಿ ಅನ್ವಯ ಯೋಜನಾ ಪ್ರಸ್ತಾವನೆಗಳನ್ನು ಗುರುತಿಸಲು, ಆದ್ಯತೆ ನೀಡಲು ಹಾಗೂ ಶಿಫಾರಸ್ಸು ಮಾಡಲು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಚಾಲನಾ ಸಮಿತಿಯನ್ನು ರಚಿಸಲಾಗಿದೆ.

ಜೆ.ಎನ್.ಎನ್.ಯು.ಆರ್. ಎಂ ನ ಅಡಿಯಲ್ಲಿ ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಚಾಲನಾ ಸಮಿತಿಯ ಅನುಮೋದನೆಗೆ ಮಂಡಿಸಲು ಸಹಕಾರ ನೀಡಲು, ಅನುದಾನ ನಿರ್ವಹಣೆಗೆ, ನಗರ ಸ್ಥಳೀಯ ಸಂಸ್ಥೆಗಳಿಗೆ ಹಣ ಬಿಡುಗಡೆಗೊಳಿಸಲು, ಆವರ್ತ ನಿಧಿ ನಿರ್ವಹಣೆ ಹಾಗೂ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ನಿಗ್ರಹಿಸಲು ಮತ್ತು ಒಪ್ಪಂದದ ಕರಾರಿನಲ್ಲಿ ಒಳಪಡಿಸಿರುವ ಸುಧಾರಣೆಗಳನ್ನು ಅನುಷ್ಠಾನಗೊಳಿಸಲು ಕೆಯುಐಡಿಎಫ್‌ಸಿ ಸಂಸ್ಥೆಯನ್ನು ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯಾಗಿ ನೇಮಿಸಿದೆ.

ನೋಡಲ್ ಏಜೆನ್ಸಿಯು ಮಾರ್ಗಸೂಚಿಗಳ ಅನ್ವಯ, ನಗರ ಮೂಲಸೌಕರ್ಯ ಮತ್ತು ನಿರ್ವಹಣೆಗಾಗಿ ಬಿಡುಗಡೆಗೊಳಿಸುವ ಅನುದಾನದ ಮೊತ್ತದಲ್ಲಿ ಕನಿಷ್ಠ ಶೇಕಡಾ 25 ರಷ್ಟನ್ನು ಮತ್ತು ನಗರದ ಬಡವರಿಗೆ ಮೂಲ ಸೇವೆಗಳನ್ನು ನೀಡಲು ಬಿಡುಗಡೆಗೊಳಿಸುವ ಮೊತ್ತದಲ್ಲಿ ಶೇಕಡಾ 10 ರಷ್ಟನ್ನು ವಸೂಲು ಮಾಡಿ, ಅದರಿಂದ ಆವರ್ತ ನಿಧಿ (ರಿವಾಲ್ವಿಂಗ್ ಫಂಡ್) ಯನ್ನು ಸೃಷ್ಟಿಸಿ, ಮುಂದೆ ಈ ನಿಧಿಯು ಮೂಲಸೌಕರ್ಯ ಯೋಜನೆಗಳಿಗೆ ಆರ್ಥಿಕ ಸಹಾಯವನ್ನು ಕಲ್ಪಿಸಲಿದೆ ಮತ್ತು ಈ ನಿಧಿಯನ್ನು ರಾಜ್ಯ ಮಟ್ಟದ ಮೂಲಸೌಕರ್ಯ ನಿಧಿಯನ್ನಾಗಿ ಉನ್ನತೀಕರಿಸಬಹುದಾಗಿದೆ.

ಜೆ.ಎನ್.ಎನ್.ಯು.ಆರ್. ಎಂ. ನಲ್ಲಿ ಪರಿಗಣಿಸಿರುವ ಅಂಶಗಳು

1) ನೀರು ಸರಬರಾಜು ಮತ್ತು ಶುದ್ಧೀಕರಣಗೊಳಿಸುವುದು
2) ಒಳಚರಂಡಿ ಮತ್ತು ನೈರ್ಮಲ್ಯ
3) ಘನ ತ್ಯಾಜ್ಯ ವಸ್ತು ನಿರ್ವಹಣೆ ಮತ್ತು ಆಸ್ಪತ್ರೆ ತ್ಯಾಜ್ಯ ನಿರ್ವಹಣೆ
4) ಮಳೆ ನೀರು ಚರಂಡಿ ಮತ್ತು ಒಳಚರಂಡಿ ನಿರ್ಮಾಣ ಮತ್ತು ಅಭಿವೃದ್ಧಿ
5) ರಸ್ತೆ ಜಾಲಸಂಪರ್ಕ
6) ನಗರ ಸಾರಿಗೆ
7) ವಾಹನ ಮತ್ತು ಟ್ರಕ್ ಟರ್ಮಿನಲ್ಸ್ ನಿರ್ಮಾಣ ಮತ್ತು ಅಭಿವೃದ್ಧಿ
8) ನಗರ ಒಳ ಪ್ರದೇಶಗಳ ನವೀಕರಣ ಮತ್ತು ಪುನರ್ ಅಭಿವೃದ್ಧಿ
9) ಪುರಾತನ ಪ್ರದೇಶಗಳ ಅಭಿವೃದ್ಧಿ
10) ಜಲ ಸಂರಕ್ಷಣೆ
11) ಕೊಳಚೆ ಪ್ರದೇಶಗಳ ಸಮಗ್ರ ಅಭಿವೃದ್ಧಿ ಅಂದರೆ ವಸತಿ ಮತ್ತು ಕೊಳಚೆಪ್ರದೇಶಗಳ ಇತ್ಯರ್ಥಗಳ ಮೂಲಸೌಕರ್ಯಗಳ ಅಭಿವೃದ್ಧಿ
12) ನಗರದ ಬಡವರಿಗೆ ಮೂಲ ಸೇವೆಗಳ ಅವಕಾಶ
13) ಬೀದಿ ದೀಪಗಳು

ಜೆ.ಎನ್.ಎನ್.ಯು.ಆರ್. ಎಂ. ಸುಧಾರಣಾ ಕಾರ್ಯಸೂಚಿ

ಈ ಧ್ಯೇಯದಲ್ಲಿ ಸೂಚಿಸಿರುವ ಕಾರ್ಯಸೂಚಿಗಳ ಸುಧಾರಣೆಗಳನ್ನು ಸಾಧಿಸಲು ಮತ್ತು ಕೈಗೆತ್ತಿಕೊಳ್ಳುವಲ್ಲಿ ಬೇಕಾಗಿರುವ ಉದ್ದೇಶಗಳು ಸರ್ಕಾರ ಮತ್ತು ನಗರಗಳ ಸಹಾಯ ಕೋರುತ್ತದೆ. ಈ ಸುಧಾರಣೆಯಲ್ಲಿ ಕೆಳಗಿನ ಎರಡು ಭಾಗಗಳಿವೆ.

1) ಕಡ್ಡಾಯವಾದ ಸುಧಾರಣೆಗಳು :

* ಸರ್ಕಾರದ ಮಟ್ಟದಲ್ಲಿ

* ಪೌರಸಭೆಗಳ ಮಟ್ಟದಲ್ಲಿ

2) ಆಯ್ಕೆ ಆಧಾರಿತ ಸುಧಾರಣೆಗಳು

ಜೆ.ಎನ್.ಎನ್.ಯು.ಆರ್. ಎಂ. ನ ಸಹಾಯಕ್ಕೆ ಬೇಕಾಗಿರುವ ಬೇಡಿಕೆಗಳು

ಕೇಂದ್ರ ಸರ್ಕಾರಕ್ಕೆ ಬೇಕಾಗಿರುವ ಅರ್ಹತೆಯುಳ್ಳ ನಗರಪ್ರದೇಶಗಳು :

1) ಮಧ್ಯಮ ಅವಧಿಯ ನಗರ ಅಭಿವೃದ್ಧಿ ಯೋಜನೆಯನ್ನು ರೂಪಿಸವುದು

2) ಯೋಜನಾ ಪ್ರಸ್ತಾವನೆಗಳನ್ನು ತಯಾರಿಸುವುದು.

3) ನಗರ ವಲಯ ಸುಧಾರಣೆಗೆ ಕಾಲಾವಧಿಯನ್ನು ನಿರ್ಧರಿಸುವುದು.

ಅನುಬಂಧ – 2

ಜವಾಹರ್ ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆಯಡಿಯಲ್ಲಿ ದಿನಾಂಕ : 31.3.2007ರ ವರೆಗೆ ಕೇಂದ್ರ ಸರ್ಕಾರದಿಂದ ಅನುಮೋದಿತವಾಗಿರುವ ಮತ್ತು ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳು.

ಕ್ರ.ಸಂ.	ಯೋಜನಾ ವಿವರ	ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)
	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ	
1	ಹೆಬ್ಬಾಳ್ ಕಣಿವೆ ಪ್ರದೇಶದಲ್ಲಿ ಮಳೇನೀರಿನ ಚರಂಡಿಯ ದುರಸ್ತಿ/ಪುನರ್ ನಿರ್ಮಾಣ	184.74
2	ವೃಷಭಾವತಿ ಕಣಿವೆ ಪ್ರದೇಶದಲ್ಲಿ ಮಳೇನೀರಿನ ಚರಂಡಿಯ ದುರಸ್ತಿ/ಪುನರ್ ನಿರ್ಮಾಣ	228.26
3	ಕೋರಮಂಗಲ ಕಣಿವೆ ಪ್ರದೇಶದಲ್ಲಿ ಮಳೇನೀರಿನ ಚರಂಡಿಯ ದುರಸ್ತಿ/ಪುನರ್ ನಿರ್ಮಾಣ	111.49
4	ಚಲಘಟ್ಟ ಕಣಿವೆ ಪ್ರದೇಶದಲ್ಲಿ ಮಳೇನೀರಿನ ಚರಂಡಿಯ ದುರಸ್ತಿ/ಪುನರ್ ನಿರ್ಮಾಣ	118.57

5	ಮಲ್ಲೇಶ್ವರಂ ವೃತ್ತದ ಬಳಿ ಕೆಳ ಸೇತುವೆ ನಿರ್ಮಾಣ	12.45
6	ಆರ್.ವಿ.ಕಾಲೇಜು ಬಳಿ ಕೆಳ ಸೇತುವೆ ನಿರ್ಮಾಣ	13.49
7	ಠಾಗೂರ್ ವೃತ್ತದ ಬಳಿ ಕೆಳ ಸೇತುವೆ ನಿರ್ಮಾಣ	17.56
8	ಎಂ.ಜಿ.ರಸ್ತೆ ಪ್ರದೇಶಗಳಲ್ಲಿ ರಸ್ತೆಯ ಕಾಮಗಾರಿಗಳು	43.61
9	ಕೋರಮಂಗಲ ಬಳಿ ರಸ್ತೆ ಕಾಮಗಾರಿಗಳು	50.45
10	ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಬೆಂಗಳೂರು ಆಯ್ದ 30 ಕೊಳಚೆ ಪ್ರದೇಶಗಳಲ್ಲಿ ಪುನರ್ ವಸತಿ ಕಾಮಗಾರಿಗಳು	189.17
11	ಮೈಸೂರು ಆಯ್ದ 20 ಕೊಳಚೆ ಪ್ರದೇಶಗಳಲ್ಲಿ ಪುನರ್ ವಸತಿ ಕಾಮಗಾರಿಗಳು	45.27
12	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಜಯನಗರದಲ್ಲಿ ಪ್ರಯಾಣಿಕರ ಸೇವಾ ಸೌಲಭ್ಯಗಳನ್ನು ಒದಗಿಸುವ ಯೋಜನೆ	8.90
13	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ 100 ಎಂ.ಎಲ್.ಡಿ. ನೀರು ಹರಿವಿಕೆಯ ಸಾಮರ್ಥ್ಯ ವೃದ್ಧಿಸುವ ಯೋಜನೆ	12.26
14	ಅಧಿಕ ನೀರು ಹರಿಯುವಿನ ಬಿಂದುಗಳಲ್ಲಿ ಮೀಟರ್ ಅಳವಡಿಕೆ ಯೋಜನೆ	15.31
15	ಒಳಚರಂಡಿ ವ್ಯವಸ್ಥೆಯ ಪುನರ್ ನಿರ್ವಹಣೆ	176.75
16	ಮೈಸೂರು ನಗರ ಪಾಲಿಕೆ ನೀರಿನ ವಿತರಣಾ ವ್ಯವಸ್ಥೆಯ ಸುಧಾರಣಾ ಯೋಜನೆ	194.54
	ಒಟ್ಟು ಮೊತ್ತ	**1422.82**

1929(1866) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ (ಬ್ರಹ್ಮಾವರ) :– ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?